ಶ್ರೀ ಎಸ್. ಆರ್. ಬೊಮ್ಮಾಯಿ.— ರೆಂಟ್ ಕಂಟ್ರೋಲ್ ಬಿಲ್ ವಿಚಾರದಲ್ಲಿ ಕಮಿಟಿ ರಿಪೋರ್ಟ್ ಈಗಾಗಲೇ ಕೊಟ್ಟಿದ್ದಾರೆ. ಅದನ್ನು ಈ ಅಧಿವೇಶನದಲ್ಲೆ ಪಾಸ್ ಮಾಡುವುದಕ್ಕಾಗುವುದಿಲ್ಲ. ಮುಂದಿನ ಸೆಷನ್‌ಗೆ ಹೋಗುತ್ತದೆ. ಕಮಿಟಿ ರಿಪೋರ್ಟನ್ನು ತಾವು ನೋಡಿಕೊಳ್ಳಿ. ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳೋಣ ಲ್ಯಾಂಡ್ ರೆವಿನ್ಯೂ ಆಕ್ಟ್ ಬಗ್ಗೆ ನಿನ್ನೆ ಹೇಳಿದ್ದೆ. ಸೆಲೆಕ್ಟ್ ಕಮಿಟಿಗೆ ಹಾಕಬೇಕೆಂದು ಫಾರ್ಮಲ್ಲಾಗಿ ರೆಸಲ್ಯೂಷನ್ ಮೂವ್ ಮಾಡುತ್ತೇನೆ.

II ಕರ್ನಾಟಕ ಭೂ ಕಂದಾಯ (ತಿನೇ ತಿದ್ದುಪಡಿ) ವಿಧೇಯಂಕ ೧೯೮೬. ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಆರ್. ಬೊಮ್ಮಾಯಿ (ಯೋಜನೆ, ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು).— ೧೯೮೬ನೇ ಇಸವಿಯ ಕರ್ನಾಟಕ ಭೂ ಕಂದಾಯ ತಿನೇ ತಿದ್ದುಪಡಿ ವಿಧೇಯಂಕವನ್ನು ೧೨ ಜನ ವಿಧಾನಸಭಾ ಸದಸ್ಯರು ಹಾಗೂ ೪ ಜನ ವಿಧಾನ ಪರಿಷತ್ತಿನ ಸದಸ್ಯರು ಒಟ್ಟು ೧೬ ಜನ ಸದಸ್ಯರಿರುವ ಸದನದ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದು ಹಾಗೂ ಅದಕ್ಕಾಗಿ ವಿಧಾನ ಪರಿಷತ್ತಿನ ಒಪ್ಪಿಗೆಯನ್ನು ಪಡೆಯಬೇಕೆಂದೂ ಮತ್ತು ಈ ಕೆಳಕಂಡ ಸದನದ ಸದಸ್ಯರು ಸಂಯುಕ್ತ ಪರಿಶೀಲನಾ ಸಮಿತಿಗೆ ಸದಸ್ಯರಾಗಿರಬೇಕೆಂದೂ ಹಾಗೂ ವಿಧಾನಸಭೆಯ ಸದಸ್ಯರುಗಳ ಹೆಸರು ಈ ಕೆಳಕಂಡಂತಿರುತ್ತವೆ ಶ್ರೀಯುತರುಗಳಾದ ನಾಗರಾಜ್, ಕೃಷ್ಣ, ಬಿ.ಎ. ಉಪ್ಪಿನ, ಬಿ.ಜಿ. ಕೊಟ್ರಪ್ಪ, ಆರ್ ಎಂ ಪಾಟೀಲ್, ಕುಮಾರಸ್ವಾಮಿ, ಜಿ ವಿ ಮಂಟೂರು, ಮುನಿಯಪ್ಪ, ಮಲ್ಲಿಕಾರ್ಜುನ ಖಾರ್ಗೆ, ಬಿ ಲಕ್ಕಪ್ಪ ರಮಾನಾಥ ರೈ. ಯು ಭೂಪತಿ, ಇದಕ್ಕೆ ಸದನದ ಒಪ್ಪಿಗೆ ಕೊಡಬೇಕು.

ಅಧ್ಯಕ್ಷರು.— ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

ಪ್ರಸ್ತಾವ ಹೀಗಿದೆ.

"೧೯೮೬ನೇ ಇಸವಿಯ ಕರ್ನಾಟಕ ಭೂ ಕಂದಾಯ (ತಿನೇ ತಿದ್ದುಪಡಿ) ವಿಧೇಯಂಕವನ್ನು ೧೨ ಜನ ವಿಧಾನಸಭಾ ಸದಸ್ಯರು ಹಾಗೂ ೪ ಜನ ವಿಧಾನ ಪರಿಷತ್ತಿನ ಸದಸ್ಯರು ಒಟ್ಟು ೧೬ ಜನ ಸದಸ್ಯರಿರುವ ಸದನದ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದು ಹಾಗೂ ಅದಕ್ಕಾಗಿ ವಿಧಾನ ಪರಿಷತ್ತಿನ ಒಪ್ಪಿಗೆಯನ್ನು ಪಡೆಯಬೇಕೆಂದೂ ಮತ್ತು ಈ ಕೆಳಕಂಡ ಸದನದ ಸದಸ್ಯರು ಸಂಯುಕ್ತ ಪರಿಶೀಲನಾ ಸಮಿತಿಗೆ ಸದಸ್ಯರಾಗಿರಬೇಕೆಂದೂ ಹಾಗೂ ವಿಧಾನಸಭೆಯ ಸದಸ್ಯರುಗಳ ಹೆಸರು ಈ ಕೆಳಕಂಡಂತಿರುತ್ತವೆ.

ಶ್ರೀಯುತರುಗಳಾದ ನಾಗರಾಜ್, ಕೃಷ್ಣ, ಬಿ ಎ ಉಪ್ಪಿನ, ಬಿ ಜಿ ಕೊಟ್ರುಪ್ಪ, ಆರ್ ಎಂ ಪಾಟೀಲ್, ಕುಮಾರಸ್ವಾಮಿ, ಜಿ ವಿ ಮಂಟೂರ್, ಮುನಿಯಪ್ಪ, ಮಲ್ಲಿಕಾರ್ಜುನ ಖಾರ್ಗೆ, ಬಿ ಲಕ್ಕಪ್ಪ, ರಮಾನಾಥ ರೈ, ಯು. ಭೂಪತಿ"
ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು.

DISCUSSION FOR SHORT DURATION

Discussion regarding admissibility of a motion relating to providing of more funds for completion of Projects of Karnataka and Cauvery rivers.

೪-೦೦ ಪಿ. ಎಂ.

† ಶ್ರೀ ಎಸ್. ಬಂಗಾರಪ್ಪ (ಸೊರಬ).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ರೆಸಲ್ಯೂಷನ್ ಕಳಿಸಿದ್ದ ವಿಚಾರದಲ್ಲಿ ನಾವು ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಬೇಕಾಗಿದೆ ಈ ಸದನದ ಕಾರ್ಯಕಲಾಪಗಳ ಸಮಿತಿಯಲ್ಲಿ ನಾವು ಚರ್ಚೆ ಮಾಡಿದ ಪ್ರಕಾರ ಸರ್ಕಾರವೇ ಒಂದು ಅಫಿಶಿಯಲ್ ರೆಸಲ್ಯೂಷನ್ ತಂದು ಕಾವೇರಿ ಜಲಾನಯನ ಪ್ರದೇಶ ಮತ್ತು ಕೃಷ್ಣಾ ಜಲಾನಯನ